(ದಿನಾಂಕಃ 10-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)

ಮುಂದುವರೆದ ಪಾಟಿ ಸವಾಲು ಃ ಶ್ರೀ ಎಂ ಆರ್ ಬಿ ಪ್ರತಿವಾದಿ ಪರ ವಕೀಲರಿಂದ -

ಮಲ್ಲಪ್ಪ ಲಕ್ಷ್ಮಣ ಮಾಡಲಗಿ ಮತ್ತು ಮಲ್ಲಿಕಾರ್ಜುನ ಕೋರೆ ಎಂಬಾತ ಒಬ್ಬನೇ ವ್ಯಕ್ತಿ ಎಂದು ತೋರಿಸಲು ದಾಖಲೆಗಳು ಇರುತ್ತವೆ. ಆ ಬಗ್ಗೆ ಬಾಂಡ ಪೇಪರ ನನ್ನ ತಾಯಿ ನೋಟರಿ ಮುಂದೆ ಮಾಡಿಸಿದ್ದು ಇರುತ್ತದೆ. ಹಾಗೆ ಬಾಂಡ ಪೇಪರನ್ನು 1994 ರಲ್ಲಿ ಮಾಡಿಸಿಕೊಡಲಾಗಿತ್ತು. ಎರಡು ಹೆಸರಿನ ವ್ಯಕ್ತಿ ನಾನೇ ಇರುತ್ತೇನೆ. ಮತ್ತು ತಾನೇ ವಾರಸುದಾರರನಿರುತ್ತೇನೆ ಎಂದು ಕೋರಿ ಹುಕ್ಕೇರಿಯ ತಹಶೀಲ್ದಾರ ಕಛೇರಿಯಲ್ಲಿ ಅರ್ಜಿ ಕೊಟ್ಟಿರುತ್ತೇನೆ. ಸ್ದ್ರಿ ಅರ್ಜಿ ಕೊಟ್ಟ ಮೇರೆಗೆ ಆದೇಶ ಇದುವರೆಗೆ ಆಗಿರುವುದಿಲ್ಲ. ಸ್ದ್ರಿ ಮಲ್ಲಪ್ಪ ಲಕ್ಷ್ಮಣ ಮಾಡಲಗಿ ಮತ್ತು ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಎಂಬಾತ ಒಬ್ಬನೇ ವ್ಯಕ್ತಿ ಎಂದು ಈದೆ ನ್ಯಾಯಾಲಯದಲ್ಲಾಗಲಿ ಮಹಾರಾಷ್ಟ್ರದ ನ್ಯಾಯಾಲಯದಲಾಗಲಿ ದಾವೆ ಸಲ್ಲಿಸಿ ಆದೇಶವನ್ನು ಪಡೆದುಕೊಂಡಿರುವುದಿಲ್ಲ. ಸ್ದ್ರಿ ಮಲ್ಲಪ್ಪ ಲಕ್ಷ್ಮಣ ಮಾಡಲಗಿ ಮತ್ತು ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಇಬ್ಬರು ಬೇರೆ ಬೇರೆ ದಿನಾಂಕದಂದು ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ 1993 ರಲ್ಲಿ ಕೋಲಾಪುರದಲ್ಲಿ ಮೃತರಾಗಿರುತ್ತಾರೆ. ನಿಖರವಾದ ದಿನಾಂಕ ನೆನಪಿಲ್ಲ. ಮಲ್ಲಪ್ಪ ಲಕ್ಷ್ಮಣ ಮಾಡಲಗಿ ತೀರಿಕೊಂಡ ನಂತರ ಆತನ ಸಹೋದರ ಕಲ್ಲಪ ಲಕ್ಷ್ಮಣ



ಮಾಡಲಗಿ ವಾರಸದಾರನೆಂದು ಹುಕ್ಕೇರಿ ತಹಶೀಲ್ದಾರವರು ವಾರಸಾ ಪ್ರಮಾಣ ಪತ್ರವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದಿರ ವಾರಸಾ ಪ್ರಮಾಣ ಪತ್ರದ ಪ್ರಕಾರವೇ ಮಲ್ಲಪ್ಪನ ಹೆಸರು ಕಡಿಮೆ ಮಾಡಿಸಿ ಕಲ್ಲಪ್ಪ ತನ್ನ ಹೆಸರು ಹಚ್ಚಿಸಿಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಜೀವಿತ ಕಾಲದಿಂದಲೂ ಈದುವರೆಗೂ ದಾವಾ ಸ್ವತ್ತಿನ ಕಬ್ಜಾ ವಹಿವಾಟದಲ್ಲಿ ಇಲ್ಲ ಎಂದರೆ ಸರಿಯಲ್ಲ. ಅಂದಿನಿಂದ ಈದುವರೆಗೂ ದಾವಾ ಸ್ವತ್ತಿನ ಕಬ್ಜಾದಲ್ಲಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನನ್ನ ತಂದೆ ಕಬ್ಜಾದಲ್ಲಿ ಇದ್ದರು ಎನ್ನುತ್ತಾರೆ. ದಾವಾ ಸ್ವತ್ತು ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಹೆಸರಿನಲ್ಲಿ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ತೀರಿಕೊಂಡ ಬಳಿಕ ದಾವಾ ಸ್ವತ್ತಿನ ದಾಖಲೆಗೆ ನನ್ನದಾಗಲಿ , ನನ್ನ ತಾಯಿ ಸಹೋದರರ ಹೆಸರಾಗಲಿ ಇರುವುದಿಲ್ಲ. ಮಲ್ಲಪ್ಪ ಲಕ್ಷ್ಮಣ ಮಾಡಲಗಿ ಇವರ ಲಗ್ನ ಆಗಿಲ್ಲ ಎಂದರೆ ಸರಿಯಲ್ಲ. ಸ್ದ್ರಿ ಮಲ್ಲಪ್ಪ ಲಕ್ಷ್ಮಣ ಮಾಡಲಗಿ ನನ್ನ ತಾಯಿ ಜೊತೆ ಮದುವೆ ಆದ ಬಗ್ಗೆ ದಾಖಲೆ ಇರುವುದಿಲ್ಲ. ಆದರೆ ಪೊಟೊ ಇರುತ್ತದೆ. ನಾವು ಸ್ದ್ರಿ ಮಲ್ಲಪ್ಪ ಮಾಡಲಗಿ ಇವರ ಮಕ್ಕಳೆಂದು ತೋರಿಸಲು ದಾಖಲೆ ಇರುವುದಿಲ್ಲ. ಸ್ದ್ರಿ ಮಲ್ಲಪ್ಪ ಲಕ್ಷ್ಮಣ ಮಾಡಲಗಿ ಇತನಿಗೆ ನಾನಾಗಲಿ , ನನ್ನ ತಾಯಿ , ಸಹೋದರರಾಗಲಿ ಸಂಬಂಧಿಕರಲ್ಲ ಎಂದರೆ ಸರಿಯಲ್ಲ. ನಾವು ಮಲ್ಲಿಕಾರ್ಜುನ ಲಕ್ಷ್ಮಣ ಕೋರೆ ಇವರ

ಮಕ್ಕಳಿದ್ದರು ಮಲ್ಲಪ್ಪ ಲಕ್ಷ್ಮಣ ಮಾಡಲಗಿ ಇವರ ಮಕ್ಕಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುವುದೆಲ್ಲಾ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ